MADAM SPEAKER.—The Report is presented.

(*iii*) *re*: *Appointment of lecturers in Medical Colleges.*

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಮಾನ್ಯ ಸಭಾಧ್ಯಕ್ಷಣಿಯವರೇ, ನಾನು ರೂಲ್ 310ರ ಪ್ರಕಾರ ಎರಡು ನೋಟೀಸ್‌ಗಳನ್ನು ಕೊಟ್ಟಿದ್ದೇನೆ. ಒಂದು ವಾಟರ್‌ಸಪ್ಲೈ ಟ್ಯಾಕ್ಸ್ ಕಲೆಕ್ಷನ್ ಬಗ್ಗೆ ಇನ್ನೊಂದು ಆರೋಗ್ಯ ಮಂತ್ರಿಗಳಿಗೆ ಸಂಬಂಧಪಟ್ಟಿದ್ದು.

ಅಧ್ಯಕ್ಷರು.—ಅದು ಅಜೆಂಡಾದಲ್ಲಿ ಚರ್ಚೆಗೆ ಬರುತ್ತದೆ. ಆಗ ತಾವು ಮಾತನಾಡಬಹುದು.

ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಇದು ಮಧ್ಯಾಹ್ನ ಚರ್ಚೆ ಮಾಡುವುದರ ವಿಷಯಗಳ ಜೊತೆಯಲ್ಲಿ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ಏಕೆಂದರೆ ಇದು ಬಹಳ ಮುಖ್ಯವಾದ ವಿಷಯ.

ಈ ವಿಷಯ ಏನು ಎಂದರೆ ಮೆಡಿಕಲ್ ಕಾಲೇಜು ಲೆಕ್ಚರರ್ಸ್ ಪೋಸ್ಟಿಗೆ ಪಬ್ಲಿಕ್ ಸರ್ವೀಸ್ ಕಮಿಷನ್‌ನವರು ಇಂಟರ್‌ವ್ಯೂಗೆ ಕರೆದಿದ್ದಾರೆ. ಇವತ್ತು ಅನಾಟಮಿ ಮತ್ತು ಫಿಸಿಯಾಲಜಿ ತೆಗೆದು ಕೊಂಡು ಎಂ. ಎಸ್. ಸಿ. ಪಾಸ್ ಮಾಡಿರುವ ವಿದ್ಯಾರ್ಥಿಗಳು ಬಹಳ ಜನ ಇದ್ದಾರೆ. ಅವರಿಗೆ ಲೆಕ್ಚರರ್ಸ್ ಪೋಸ್ಟನ್ನು ಕೊಡಕೂಡದು ಎಂದು ಆದೇಶ ಕೊಟ್ಟಿದ್ದಾರೆಂದು ತಿಳಿದು ಬಂದಿದೆ. ಈ ಲೆಕ್ಚರರ್ಸ್ ಪೋಸ್ಟಿಗೆ ಬರೀ ಎಂ. ಬಿ. ಬಿ. ಎಸ್. ಮಾಡಿರುವವರಿಗೆ ಮಾತ್ರ ಕೊಡುವುದು ಎಂದು ಹೇಳಿದ್ದಾರೆ. ಆದರೆ ಎಂ. ಎಸ್. ಸಿ. ಮಾಡಿದ ಈ ವಿದ್ಯಾರ್ಥಿಗಳು ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಿ ಓದಿದ್ದಾರೆ. ಇವರಿಗೆ ಬೇರೆ ಏನು ಕೆಲಸ ಸಿಕ್ಕಲೆ ಅಲೆಯುವಂತಹ ಪರಿಸ್ಥಿತಿ ಬಂದಿದೆ. ಇವರಿಗೆ ಯಾವ ಅಪಾಯಿಂಟ್ ಸಿಕ್ಕುವುದಿಲ್ಲ. ಈ ಸಮಸ್ಯೆಯನ್ನು ಬಿಡಿಸುವ ಬಗ್ಗೆ ಮಾನ್ಯ ಆರೋಗ್ಯ ಮಂತ್ರಿಗಳು ಏನು ತೀರ್ಮಾನ ತೆಗೆದುಕೊಡಿದ್ದಾರೆಂದು ತಿಳಿಸಬೇಕು.

†SRI H. SIDDAVEERAPPA (Minister of Health).—Madam Speaker I State as follows —

The appointment of Lectuers in the Medical Colleges are made under the Karnataka Health and Family Planning Services (Collegiate Branch) Recruitment Rules 1967. In the Department of Anotomy, Physiology, Bio-Chemistry etc,, the rules earlier provided that when a medical graduate was not available for selection, a non-medical graduate holding M. Sc., or Ph. D., Degree qulification in these subjects which are treated as non-clinical would be eligible for appointement as a Lecturer in these subjects.

Since there were a number of repesentations stating that it would hit hard such of those students who possess a Master's degree or a Ph. D. Degree in non-clinical subject, amendments were made in Notification dated the 7th October 1974 treating them on par with those candidates who posses a medical degree. It would thus be seen that greater opportunity has been recently given to non-medical post-graduates possessing M.Sc., or Ph. D., degree qualification in a particalar non-clinical subject.

It with thus be seen that for selection of candidates as Lecturers in non-clinical subjects, the medical graduates are treated on par with the non-medical graduates possessing M. Sc., or a Ph. D., degree in that partictlar non-clinical subject. The Hon. Member Sri Shreenally Chandrashekhar has stated that a direction has been given to the Public Service Commission that only persons possessing M.B.B.S. degree should be selected for the posts of Lecturers and that persons possessing M. Sc., in those subject shall not be selected. This is not true.

ಶ್ರೀ ಎಸ್. ಎಂ. ಶೀರನಾಳಿ ಚಿಂದ್ರ ಶೇಖರ್.—ವ ನ್ಯ ಮಂತ್ರಿಗಳು ನಾನು ಹೇಳಿದಂಥ ವಿಷಯ ವನ್ನು ಸತ್ಯಕ್ಕೆದೂರ ಎಂದು ಹೇಳಿದ್ದಾರೆ. ಪಬ್ಲಿಕ್ ಸರ್ವೀಗ್ ಕಮಿಷನ್ ಚೆರ್ಮನ್ ಅವರು ಹೇಳಿರತಕ್ಕ ವಿಚಾರ ಇದು. ಮೆಡಿಕಲ್ ಗ್ರಾಜುಯೇಟ್ಸ್, ಎಕ್ಸ್‌ಪರ್ಟ್ಸ್ ಎಂದು ಈ ರೀತಿ ಒಪಿನಿಯನ್ ಕೊಡುತ್ತಿದ್ದಾರೆ. ಆದ್ದರಿಂದ ನಾವು ಹೆಲ್ಪ್‌ಲೆಸ್ ಎಂದು ಅವರು ಹೇಳಿದ್ದಾರೆ. ನೂರಾರು ಜನ ಎಂಎಸ್‌ಸಿ, ಗ್ರಾಜುಯೇಟ್ಸ್ ಅವರನ್ನು ಭೇಟಿ ಮಾಡಿದಾಗ ಅವರು ಹೀಗೆ ಹೇಳಿದ್ದಾರೆ. ಆದ್ದರಿಂದ ಇದು ಸುಳ್ಳು ಎಂದು ಹೇಳಿದರೆ ನಾನು ಏನು ಹೇಳಲಿಕ್ಕಾಗುತ್ತದೆ. ?

10-30 A.M.

SRI H. SIDDAVEERAPPA.—Government have not issued any directive. Government have said that they must be treated on a par and they are also equally eligible for being selected. If the gentleman who represents the Department has said it, it is not correct. As I have said, there is a Government notification to that effect. It they have said, it is contary to that notification.

(iv) *re. Demolition of house of Harijans in Bijapure* —

†ಶ್ರೀ ಜೆ. ಎಲ್. ಕಬಾಡಿ (ಬಳ್ಳಾರಿ).—ಬಿಜಾಪುರದ ಇಂದಿರಾನಗರದಲ್ಲಿ ಇರತಕ್ಕ ಮನೆ ಗಳಲ್ಲಿದ್ದ ಜನರನ್ನು ಸರ್ಕಾರದವರು ಉಚ್ಚಾಟನೆ ಮಾಡಿದ್ದರ ಬಗ್ಗೆ ನಾನು ಒಂದೆರಡು ಮಾತನ್ನು ಹೇಳ ಬೇಕಾಗಿದೆ. ಆಲ್ಲಿಯ ಜನರು ಮಕ್ಕಳು ಮರಿಗಳನ್ನು ಕಟ್ಟಿಕೊಂಡು ಊರಿ ಬಿಸಿಲಿನಲ್ಲಿ ನಿಂತಿದ್ದಾರೆ. ಅವರ ಬಗ್ಗೆ ಯಾವ ತರಹದ ವ್ಯವಸ್ಥೆಯನ್ನೂ ಸರ್ಕಾರದವರು ಮಾಡಲಿಲ್ಲ. ಮಾನ್ಯ ರಾಥೋಡ್ ಅವರು ಬಿಜಾಪುರಕ್ಕೆ ಬಂದಾಗ ಅವರನ್ನು ಹೇಳಿ ಕೇಳಿ ಎಲ್ಲಾ ಆಯಿತು. ಅವರು ಅವರ ಮುಂದೆ ಪ್ರದರ್ಶನ ಮಾಡಿದಾಗ, ಪೋಲೀಸರ ಕಡೆಯಿಂದ ಆ ಜನರನ್ನು ತಮ್ಮಮನೆಗಳಿಂದ ಹೊರಗೆ ಹಾಕಿದ್ದಾರೆ ಪೇಪರ್‌ನವರನ್ನು ಸಹಿತ ಅಲ್ಲಿಗೆಬಿಟ್ಟಿಲ್ಲ. ಪ್ರೆಸ್‌ನವರನ್ನು ಸಹಿತ ಪೋಲೀಸರಿಂದ ಹೊರಗೆ ದಬ್ಬಿಸಿ ದ್ದಾರೆ, ಇದು ಸಹ ಪೇಪರ್‌ನಲ್ಲಿ ಬಂದಿದೆ. ನಾನು ಮುಖ್ಯಮಂತ್ರಿಗಳಿಗೆ ಇದರ ಬಗ್ಗೆ ಫೋನ್ ಮಾಡಿ ಕೇಳಿದಾಗ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದಾರೆ. ಇವತ್ತು ಕೂಡ ಆ ಜನ ಊರಿ ಬಿಸಿಲಿನಲ್ಲಿ ನಿಂತಿ ದ್ದಾರೆ. ಬಿಜಾಪುರದ ಜಿಲ್ಲಾಧಿಕಾರಿಗಳಂ ಕೈಕೊಂಡಂಥ ಕ್ರಮ ಏನು ಇದೆ ಇದಂ ಶೋಚನೀಯವಾದದಂ. ಬಡ ಜನರಿಗೆ ತಮ್ಮಮನೆಗಳನ್ನು ಕಳೆದುಕೊಂಡು ಬಹಳ ಲುಕ್ಸಾನು ಆಗಿದೆ, ಇದಕ್ಕೆ ಜವಾಬ್ದಾರರು ಯಾರು ಇದನ್ನು ತಾವು ಸೀರಿಯಸ್ ಆಗಿ ಯೋಚನೆ ಮಾಡಬೇಕು. ಇದರಿಂದ ಆ ಜನರಲ್ಲಿ ಒಂದು ಆ ಕ್ರೋಶ ಮನೋಭಾವ ಉಂಟಾಗಿದೆ. ಇವತ್ತು ಸರ್ಕಾರದವರು ಬಡಜನರಿಗೆ ಯಾವ ತರಹ ಆಶ್ರಯ ವನ್ನು ಕೊಟ್ಟಿಲ್ಲ. ಮಾನ್ಯ ರಾಥೋಡ್ ಅವರು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಇಮಿಡಿಯಟ್ ಆಗಿ ವ್ಯವಸ್ಥೆಮಾಡುತ್ತೇವೆಂದು ಹೇಳಿದ್ದರು. ಇದರ ಬಗ್ಗೆ ಮಾನ್ಯ ಸರ್ಕಾರದವರು ತಕ್ಷಣ ಯೋಚನೆ ಮಾಡಬೇಕು.

†ಶ್ರೀ ಡಿ ಕೆ. ನಾಯ್ಕರ (ನ್ಯಾಯ ಮತ್ತು ಪೌರಾಡಳಿತ ಸಚಿವರು).—ಮಾನ್ಯ ಅಧ್ಯಕ್ಷರೇ, ಇದಂ ಪ್ರೈವೇಟ್ ಓನರ್ ಜಾಗ ಎಂದು ನಮಗೆ ಮಾಹಿತಿ ಬಂದಿದೆ. ಇಲ್ಲಿ ಒಂದು ಟ್ರೈಸಿಂಗ್‌ಕಾಲೇಜು ಕಟ್ಟ ಬೇಕು ಎಂದು ಇದನ್ನು ಸರ್ಕಾರದವರು ಅಕ್ವಿಜಿಷನ್ ಮಾಡಿದ್ದಾರೆ. ಇದನ್ನು ಅಕ್ವಿಯರ್ ಮಾಡಿ ಮಾಡಿ ಎರಡೂವರೆ ಲಕ್ಷ ರೂಪಾಯಿಗಳ ಕಾಂಪನ್ಸೇಷನ್ ಅನ್ನು ಇದರ ಮಾಲೀಕರಿಗೆ ಕೊಟ್ಟಿದ್ದಾರೆ. ಅಕ್ವಿಜಿಷನ್ ಪ್ರೊಸೀಡಿಂಗ್ಸ್ ಸ್ಟಾರ್ಟ್ ಮಾಡಿದಾಗ ಜನರು ಇದನ್ನು ಆಕ್ಯುಪೈ ಮಾಡಿಕೊಂಡು ಗುಡಿಸಲು ಹಾಕಿಕೊಂಡಿ ದ್ದಾರೆ. ಇದು ಪಬ್ಲಿಕ್ ಪರ್ಪಸ್‌ಗೆ ಎಂದು ಎರಡು ಸಲ ಎವಿಕ್ಟ್ ಮಾಡಬೇಕು ಎಂದು ಹೇಳಿದಾಗಲೂ ಕೂಡ ಇವರು ಮಾಡಿಲ್ಲ ಇವರಿಗೆ ಅನಾನುಕೂಲ ಆಗಬಾರದು ಎಂದು ಆಲ್ಟರ್ನೇಟಿವ್ ಪ್ರಾವಿಷನ್ ಮಾಡಿ ಎವಿಕ್ಟ್ ಮಾಡಬೇಕು ಎಂದು ಡೈರೆಕ್ಷನ್ ಕೊಟ್ಟಿದ್ದಾರೆ ಇದನ್ನು ನಾನು ಜಿಲ್ಲಾಧಿಕಾರಿಗಳಿಂದ ಫೋನ್ ಮೂಲಾಂತರ ತಿಳಿದು ಕೊಂಡಿದ್ದೇನೆ. ಆಲ್ಟರ್ನೇಟೀವ್ ಪ್ರಾವಿಷನ್ ಮಾಡಿ ಎವಿಕ್ಟ್ ಮಾಡುವಂಥ ಕ್ರಮವನ್ನು ತೆಗೆದುಕೊಂಡಿದ್ದಾರೆ. ಈ ಮಾಹಿತಿ ನನಗೆ ಫೋನ್ ಮೂಲಕ ಬಂದಿದೆ.